**ಕರ್ನಾಟಕ ಸರ್ಕಾರ**
**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ದೇವನಹಳ್ಳಿ**
**ಎಸ್.ಸಿ. ನಂ. 15007/2023**

| | | |
|---|---|---|
| ಹೆಸರು | : | ರಂಜಿತ್ ಕುಮಾರ್ |
| ತಂದೆ ಹೆಸರು | : | ರಾಮಚಂದ್ರಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ | : | ಕುರುಬರಹಳ್ಳಿ |

**PW-16, CW-19**

(ಇಂದು ದಿನಾಂಕ 06.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆ : ಅಭಿಯೋಜನೆ ಪರ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ**

ನನಗೆ ಚಾಸಾ.2 ಮತ್ತು 19 ಗೊತ್ತು. 2021 ರಲ್ಲಿ ಒಂದುವರೆ ವರ್ಷ ಅಮೆಜಾನ್ ಕಂಪನಿಯಲ್ಲಿ ಪ್ರಾಬ್ಲಮ್ ಸಾಲೋವರ್ ಆಗಿ ಕೆಲಸ ಮಾಡುತ್ತಿದ್ದೆ. ನನಗೆ 2 ಮತ್ತು 3 ನೇ ಆರೋಪಿತರು ಗೊತ್ತು. ಉಳಿದ ಆರೋಪಿತರು ಪರಿಚಯ ಇರುವುದಿಲ್ಲ. ನಾವೆಲ್ಲರೂ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆವು. ಅಮೆಜಾನ್ ಕಂಪನಿಯಲ್ಲಿ 2 ಶಿಫ್ಟ್ ಗಳಲ್ಲಿ ಕೆಲಸ ಮಾಡುತ್ತಿದ್ದೆ. ಚಾಸಾ.19 ಅಮೆಜಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ನನಗೆ ತಿಂಗಳಿಗೆ ರೂ.17,000/- ಸಂಬಳ ಕೊಡುತ್ತಿದ್ದರು. 2 ನೇ ಶಿಫ್ಟ್ ಸಂಜೆ 6.00 ರಿಂದ ಬೆಳಗಿನ ಜಾವ 4.00 ಗಂಟೆಯವರೆಗೆ ಇರುತ್ತಿತ್ತು. ಈ ಕೇಸಿನ ಬಗ್ಗೆ ನನಗೆ ಯಾವುದೇ ವಿಷಯ ಗೊತ್ತಿಲ್ಲ. ಚಾಸಾ.2 ರವರಿಗೆ ಏನಾಗಿತ್ತು ಅನ್ನುವುದು ನನಗೆ ಗೊತ್ತಿಲ್ಲ. ನನಗೆ ಪ್ರೀತಿ ಅನ್ನುವ ಹುಡುಗಿ ಗೊತ್ತಿಲ್ಲ. ಸುರೇಂದ್ರ ಈತನಿಗೆ ಚಾಕು ಹಾಕಿದ ವಿಷಯ ಗೊತ್ತಾಯಿತು ಆದರೆ ಯಾರು ಹಾಕಿರುತ್ತಾರೆ ಮತ್ತು ಯಾವ ಕಾರಣಕ್ಕಾಗಿ ಹಾಕಿರುತ್ತಾರೆ ಅನ್ನುವುದು ಗೊತ್ತಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಪಿ.ಪಿ.ಯವರ ವಿನಂತಿ ಮೇರೆಗೆ ಕಡತವನ್ನು ಹಾಗೂ ಸಾಕ್ಷ್ಯವನ್ನು ಪರಿಗಣಿಸಿ, ಈ ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲವೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಪಿ.ಪಿ. ಯವರಿಂದ :**

ದಿನಾಂಕ 31.01.2022 ರಂದು ನಾನು ಸಂಜೆ ನೈಟ್ ಶಿಫ್ಟ್ ಗೆ ಕೆಲಸಕ್ಕೆ ಹೋಗಲು ಎಂದು ಕಂಪನಿಯ ಬಳಿ ಬಂದಾಗ ನನ್ನೊಂದಿಗೆ ಸಂಜಯ್ ಎನ್ನುವವನು ಬಂದ ನಾವು ಕಂಪನಿಯ ಮುಂಭಾಗದಲ್ಲಿರುವ ಟೀ ಅಂಗಡಿಯ ಪಕ್ಕದಲ್ಲಿ ಸಂಜೆ 6.45 ಗಂಟೆಯಲ್ಲಿ ಕುಳಿತಿರುವಾಗ 2 ಮತ್ತು 3 ನೇ ಆರೋಪಿತರು ಉಳಿದ ಆರೋಪಿತರೊಂದಿಗೆ ಸೇರಿಸಿಕೊಂಡು ಚಾಸಾ.2 ರವರಿಗೆ ಹೇಗಾದರೂ ಮಾಡಿ ಹೊಡೆಯಬೇಕು, ಆತನು ರಾಕೇಶ್‌ನ ಲವರ್ ಆದ ಪ್ರೀತಿ ಎಂಬುವವಳಿಗೆ ವಿನಹ ಕಾರಣ ಸಂದೇಶಗಳನ್ನು ಕಳುಹಿಸಿದ್ದಾನೆ ಆತನನ್ನು ಈ ದಿನ ಮುಗಿಸಬೇಕು ಎಂದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು, ನಾನು ಮತ್ತು ಸಂಜಯ್ ಅವರ ಮಾತನಾಡುವುದನ್ನು ಕೇಳಿಸಿಕೊಳ್ಳುತ್ತಾ ಅವರು ಏನು ಮಾಡುತ್ತಾರೆ ಎಂದು ನೋಡುತ್ತಿದ್ದೆವು ಅನ್ನುವುದು ಸರಿಯಲ್ಲ. ಆ ಸಮಯದಲ್ಲಿ ಆರೋಪಿ ವರುಣ್ ನಮ್ಮ ಕಡೆ ನೋಡಿ ನಾವುಗಳು ಕೇಳಿಸಿಕೊಳ್ಳುತ್ತಿದ್ದೆವು ಎಂದು ತಿಳಿದು ನಮ್ಮ ಬಳಿ ಬಂದು ನಮ್ಮನ್ನು ಕಂಪನಿಯ ಒಳಗಡೆ ಕರೆದುಕೊಂಡು ಹೋದರು ಅನ್ನುವುದು ಸರಿಯಲ್ಲ. ಕಂಪನಿಯ ಒಳಗಡೆ ಸುರೇಂದ್ರನು ಕೆಲಸ ಮಾಡುತ್ತಿದ್ದು, ಆತನು ಪ್ರೀತಿ ಎಂಬ ಹುಡುಗಿಗೆ ಮಸೇಜ್ ಮಾಡಿದ ವಿಷಯಕ್ಕೆ ಆತನನ್ನು ಕೆಲಸದಿಂದ ಟರ್ಮಿನೇಟ್ ಮಾಡಿದ್ದರು, ಈ ವಿಷಯವಾಗಿ ಆರೋಪಿ ವರುಣ್ ಯಾರಿಗೋ ಫೋನ್ ನಲ್ಲಿ ಸುರೇಂದ್ರ ಆಚೆ ಬರುತ್ತಿದ್ದಾನೆ ಆತನನ್ನು ಈ ದಿನವೇ ಮುಗಿಸಿ ಎಂದು ಹೇಳುತ್ತಿದ್ದನ್ನು ಅನ್ನುವುದು ಸರಿಯಲ್ಲ. ನಂತರ ಸುಮಾರು ರಾತ್ರಿ 8.00 ಗಂಟೆಗೆ ಚಾಸಾ.2 ರವರಿಗೆ ಕಂಪನಿಯ ಹೊರಗಡೆ ಯಾರೋ ಚಾಕುವಿನಿಂದ ಚುಚ್ಚಿದ್ದಾರೆ ಎಂದು ಕಂಪನಿಯವರಿಗೆ ತಿಳಿಯಿತು ಹಾಗೂ ನನಗೂ ರಾಕೇಶ್ ಮತ್ತು ಆತನ ಸ್ನೇಹಿತರು ಸೇರಿಕೊಂಡು ಸುರೇಂದ್ರನಿಗೆ ಚಾಕು ಹಾಕಿದವರಾಗಿರುತ್ತಾರೆ ಎಂದು ಮಾಹಿತಿ ತಿಳಿಯಿತು ಅನ್ನುವುದು ಸರಿಯಲ್ಲ. ಸುರೇಂದ್ರನಿಗೆಹೊಡೆದು ಕೊಲೆ ಮಾಡಲು ಹೊಂಚು ಹಾಕುತ್ತಿದ್ದ ರಾಕೇಶ್, ವರುಣ್ ಮತ್ತು ಅವನ ಸ್ನೇಹಿತರನ್ನು ನೋಡಿದ್ದು ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ದಿನಾಂಕ 02.02.2022 ರಂದು ಪೊಲೀಸರು ಮುಂದೆ ದಿನಾಂಕ 31.01.2022 ರಂದು –----------------- ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಅನ್ನುವುದು ಸರಿಯಲ್ಲ. ಹೇಳಿಕೆಯ ಭಾಗವನ್ನು ನಿ.ಪಿ.23 ಎಂದು

ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀ ಸವಾಲು : 1 ರಿಂದ 7 ನೇ ಆರೋಪಿ ಪರ ವಕೀಲರಿಂದ:** ಪಾಟೀ ಸವಾಲು ಇಲ್ಲ

ಓ.ಹೇ.ಕೇ.ಸ.ಇ.

V AD& SJ, B,luru (R)
Devanahalli